# ವಿಶಿಷ್ಟ ದೇವಾಲಯ

ಇದು ಅರಸೀಕೆರೆಯಲ್ಲಿರುವ ಶಿವನ ದೇವಾಲಯ. ಹೊಯ್ಸಳ ಶೈಲಿಯ ದೇವಸ್ಥಾನಗಳಲ್ಲೆಲ್ಲೂ ಕಾಣಸಿಗದ 16 ಮೂಲೆಗಳ ನಕ್ಷತ್ರಾಕಾರದ ಗುಮ್ಮಟವಿರುವ ಮುಖ ಮಂಟಪ ಈ ದೇವಾಲಯಕ್ಕಿದೆ. ಇದು ದೇವಾಲಯದ ವಾಸ್ತುಶಿಲ್ಪದಲ್ಲಿ ವಿಶೇಷ ಎನ್ನುತ್ತಾರೆ ಇತಿಹಾಸ ತಜ್ಞರು.

**-ಕೆ.ಎನ್. ಪ್ರಭಾಕರ ಗುಪ್ತ, ಹಾಸನ**





# ಕಟ್ಟಿಗೆ ಅಗಳಿ

ಈ ಬಾಗಲಿಗೆ ಆರು ಅಡಿ ಉದ್ದದ ಅಗಳಿ ಹಾಕಲಾಗಿದೆ. ಅಗಳಿ ಅಂದರೆ ಕಟ್ಟಿಗೆಯ ಚಿಲಕ. ಈ ಅಗಳಿಯನ್ನು ಒಂದು ಕಡೆಯಿಂದ ಮತ್ತೊಂದು ಕಡೆಗೆ ಹಾಕಲಾಗಿದೆ. ಈ ರೀತಿ ಗಟ್ಟಿಯಾದ ಅಗಳಿ ಹಾಕಿದರೆ ಎಂಥವನಿಗೂ ಬಾಗಿಲನ್ನು ತೆಗೆಯಲು ಬರುವುದಿಲ್ಲ ಹಾಗೂ ಕಳ್ಳರು ಮನೆಯೊಳಗೆ ನುಸುಳುವುದು ಕನಸಿನ ಮಾತು. ಆದರೆ ಈಗಿನ ಕಬ್ಬಿಣದ ಚಿಲಕಗಳು ಅಷ್ಟು ಗಟ್ಟಿಯಾಗಿಲ್ಲ. ಒದ್ದರೆ ಕದಗಳು ಮುರಿದುಕೊಂಡು ಬೀಳುವವು.

**-ಜಗದೀಶ ಎಂ. ಸಂಗಣ್ಣವರ, ಬೈಲಹೊಂಗಲ**

# ಮಹಿಷಿ ಮೇಲೆ ಮೇಕೆ ಸವಾರಿ!

ಎಮ್ಮೆ ಯಮನ ವಾಹನವಂತೆ. ಆದರೆ ಇಲ್ಲೊಂದು ಮೇಕೆ ಮರಿ ಎಮ್ಮೆಯನ್ನು ತನ್ನ ವಾಹನವನ್ನಾಗಿ ಮಾಡಿಕೊಂಡಿದೆ. ಬಳ್ಳಾರಿ ಜಿಲ್ಲೆಯ ಸಂಡೂರು ತಾಲ್ಲೂಕಿನ ಚಿಕ್ಕಕೆರೆಯಾಗಿನಹಳ್ಳಿಯಲ್ಲಿ ಇಂತಹ ದೃಶ್ಯ ಕಾಣಸಿಗುತ್ತದೆ. ಈ ಮೇಕೆ ಮರಿಯು ಪ್ರತಿನಿತ್ಯ ಈ ಎಮ್ಮೆ ಮೇಲೆ ಸವಾರಿ ಮಾಡುವುದು, ಕುಣಿದು ಕುಪ್ಪಳಿಸುವುದು ಮಾಡಿದರೂ ಈ ಎಮ್ಮೆ ಮಾತ್ರ ಜಪ್ಪಯ್ಯ ಅನ್ನಲ್ಲ. ಎಮ್ಮೆ ಮತ್ತು ಮೇಕೆಯ ನಡುವೆಯ ಈ ಅನ್ಯೋನ್ಯತೆ 'ಯಾರೇ ಕೂಗಾಡಲಿ, ಊರೇ ಹೋರಾಡಲಿ ಎಮ್ಮೆ ನಿನಗೆ ಸಾಟಿ ಇಲ್ಲ...' ಎನ್ನುವ ಹಾಡನ್ನು ನೋಡುಗರಿಗೆ ನೆನಪಿಸುತ್ತದೆ!

**ಚಿತ್ರ- ಬರಹ: ಸ್ವರೂಪಾನಂದ ಎಂ., ಕೊಟ್ಟೂರು**

